ಬಗರ್ ಹುಕುಂ ಸಾಗುವಳಿ ಕುರಿತು

1619 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಗರ್‌ಹುಕುಂ ಸಾಗುವಳಿ ಜಮೀನು ಸಕ್ರಮೀಕರಣದ ಬಗ್ಗೆ ಸರ್ಕಾರವು ಕ್ರಮ ಕೈಗೊಂಡಿದ್ದರ ಪ್ರತಿಫಲವಾಗಿ ತುಮಕೂರು ಜಿಲ್ಲೆಯಲ್ಲಿ ಎಷ್ಟು ಮಂದಿ ಬಗರ್‌ಹುಕುಂದಾರರು ಸಕ್ರಮೀಕರಣ ಕೋರಿ ಅರ್ಜಿ ಸಲ್ಲಿಸಿದ್ದಾರೆ, ಹಾಗೂ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು?*

ಆ) *ಅರ್ಜಿ ನಮೂನೆ 50 ರಲ್ಲಿ ಅರ್ಜಿ ಸಲ್ಲಿಸದೆ ಇರುವ ಬಗರ್‌ಹುಕುಂದಾರರು ಅನೇಕರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಅರ್ಜಿ ನಮೂನೆ 50 ರಲ್ಲಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ಕೊಡುವುದೇ ಅಥವಾ ಈ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಳ್ಳುವಿರಾ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು)

ಅ) ತುಮಕೂರು ಜಿಲ್ಲೆಯಲ್ಲಿ 90,206 ಜನ ಜಮೀನು ಸಕ್ರಮೀಕರಣ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ತಾಲ್ಲೂಕುಮಟ್ಟದಲ್ಲಿ ಸಕ್ರಮೀಕರಣ ಸಮಿತಿ ರಚನೆ ಮಾಡಿದ್ದು ಈ ಸಮಿತಿಯು ಕಾನೂನು ಪ್ರಕಾರ ಅರ್ಹ ಅರ್ಜಿದಾರರಿಗೆ ಜಮೀನು ಸಕ್ರಮಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ.

ಆ) ಬಂದಿರುತ್ತದೆ.

ಇ) ಅರ್ಜಿ ನಮೂನೆ 50 ರಲ್ಲಿ ಅರ್ಜಿ ಸಲ್ಲಿಸಲು ಮತ್ತೆಮ್ಮೆ ಅವಕಾಶ ಕೊಡುವುದರ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಇಲ್ಲ. ಆದಾಗ್ಯೂ ಸೂಕ್ತ ಕ್ರಮ ತೆಗೆದುಕೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ದ.ಕನ್ನಡ ಜಿಲ್ಲೆಯಲ್ಲಿ ಜುಲೈನಲ್ಲಿ ಆದ ಮಳೆಗೆ ಸಂಭವಿಸಿದ ನಷ್ಟ .

1620 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಜಿಲ್ಲೆಯ ನದಿಗಳಲ್ಲಿ ಪ್ರವಾಹದಿಂದ ಆದ ನಷ್ಟಗಳೆಷ್ಟು?*

ಆ) *ಈ ಮಳೆಯಿಂದಾಗಿ ಜಿಲ್ಲೆಯಲ್ಲಿ ಎಷ್ಟು ಮನೆ ಕುಸಿತಗಳಾಗಿವೆ, ಎಷ್ಟು ಪ್ರಾಣ ಹಾನಿಯಾಗಿದೆ ಎಷ್ಟು ಬೆಳೆನಾಶವಾಗಿದೆ?*

ಇ) *ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಆದ ಹಾನಿಯ ವಿವರಗಳನ್ನು ನೀಡುವುದು?*

ಈ) *ಈ ಬಗ್ಗೆ ಸರ್ಕಾರ ಯಾವ ಯಾವ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು).

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆ ಪ್ರವಾಹದಿಂದ ಆಗಿರುವ ನಷ್ಟ ರೂ. 13.47 ಕೋಟಿಗಳು.

ಆ) ಈ ಮಳೆಯಿಂದಾಗಿ ಜಿಲ್ಲೆಯಲ್ಲಿ 19 ಜೀವಹಾನಿ 119 ಮನೆಗಳು ಪೂರ್ಣವಾಗಿ ಹಾಗೂ 681 ಮನೆಗಳು ಭಾಗಶಃವಾಗಿಯೂ ಹಾನಿಗೊಳಗಾಗಿವೆ. ಅಲ್ಲದೇ, 1743.60 ಹೆಕ್ಟೇರ್ ವಿಸ್ತೀರ್ಣದಲ್ಲಿನ ಕೃಷಿ ಬೆಳೆ ಹಾನಿಯಾಗಿರುತ್ತದೆ.

ಇ) ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಹಾನಿಯ ವಿವರ ಕೆಳಕಂಡಂತಿದೆ :-

ಪೂರ್ಣವಾಗಿ ಕುಸಿದ ಮನೆಗಳು	:	14
ಭಾಗಶಃ ಕುಸಿದ ಮನೆಗಳು	:	35
ನೀರಾವರಿ ಬಾವಿ ಹಾನಿ	:	1
ಹಾನಿಗೊಂಡ ಕಟ್ಟಡ:ಮೋರಿ	:	6
ಹಾನಿಗೊಂಡಿರುವ ರಸ್ತೆ	:	63.75 ಮೀಟರ್
ಅಂದಾಜು ನಷ್ಟ	:	ರೂ. 65.38 ಲಕ್ಷಗಳು

ಅಲ್ಲದೇ, ಸಮುದ್ರ ಕೊರೆತದಿಂದ ರೂ.23.45 ಲಕ್ಷಗಳ ಹಾನಿಯಾಗಿದೆಯೆಂದು ಅಂದಾಜಿಸಲಾಗಿದೆ.

ಈ) ಕೆಳಕಂಡಂತೆ ಪರಿಹಾರ ಧನವನ್ನು ಪಾವತಿ ಮಾಡಲಾಗಿದೆ :-

ವಾಸದ ಮನೆಗಳ ಹಾನಿಗೆ	-	ರೂ. 1.12 ಲಕ್ಷಗಳು
ನೀರಾವರಿ ಬಾವಿ ಹಾನಿಗೆ	-	ರೂ. 0.30 ಲಕ್ಷಗಳು
	ಒಟ್ಟು	**ರೂ. 1.15 ಲಕ್ಷಗಳು**

ಅಲ್ಲದೇ, ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಕ್ಷಿಪ್ರ ಕ್ರಮಕೈಗೊಳ್ಳಲಾಗಿದೆ.

ಹಾನಿಗೊಂಡ ಸಾರ್ವಜನಿಕ ಆಸ್ತಿಗಳ ತುರ್ತು ದುರಸ್ಥಿ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗಿದೆ.

ದ. ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕರಿಂದ ಮತ್ತು ಜನಪ್ರತಿನಿಧಿಗಳಿಂದ ಸ್ವೀಕರಿಸದ ಮನವಿ

1621 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?